ಗ್ರಾಮದ ಕೆರೆಗಳ ಅಭಿವೃದ್ಧಿಪಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುತ್ತಿದೆ

ಮಾನ್ಯ ವಿಧಾನ ಸದಸ್ಯರಾದ ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.1111ಕ್ಕೆ ಅನುಬಂಧ

ಕ್ರ ಸಂ	ಕಾಮಗಾರಿಯ ಹೆಸರು	ಗುತ್ತಿಗೆದಾರರ ಹೆಸರು	ಅಂದಾಜು ಮೊತ್ತ	ಗುತ್ತಿಗೆ ಮೊತ್ತ	ಟೆಂಡರ್ ಪ್ರಿಮಿಯಂ	ಷರಾ
1	ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಮಾದಾಪೂರ ಕೆರೆ ಸುಧಾರಣೆ ಕಾಮಗಾರಿ	ಶ್ರೀ ಎಸ್ ಜಿ ಪಾಟೀಲ್‌ಕುಲಕರ್ಣಿ ಗರಗ	19 57	20 73	5 90% ಹೆಚ್ಚು	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ
2	ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ತೆವರಮೆಳ್ಳಿ ಹಳ್ಳಿ ಕೆರೆ ಹಾಗೂ ಕಾಲುವೆ ಸುಧಾರಣೆ ಮತ್ತು ದುರಸ್ತಿ ಕಾಮಗಾರಿ	ಶ್ರೀ ಕೆ ಬಸವರಾಜ್, ಹುಬ್ಬಳ್ಳಿ	14 77	15 62	5 79% ಹೆಚ್ಚು	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ
3	ಹಾವೇರಿ ಜಿಲ್ಲೆ ಸವಣೂರ ತಾಲೂಕಿನ ಯಲವಿಗಿ ಕೆರೆ ಹಾಗೂ ಕಾಲುವೆ ಸುಧಾರಣೆ ಕಾಮಗಾರಿ	ಮೆ ಕರ್ನಾಟಕ ಸಿಮೆಂಟ್ ಪೈಪ್ ಫ್ಯಾಕ್ಟರಿ, ಹುಬ್ಬಳ್ಳಿ	24 61	26 03	5 89% ಹೆಚ್ಚು	ಕಾಮಗಾರಿಯು ಪೂರ್ಣಗೊಳ್ಳುವ ಹಂತದಲ್ಲಿದೆ

850(1112) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿಗ್ಗಾಂವ ತಾಲ್ಲೂಕು ಬಂಕಾಪುರ ಕೋಟೆ ಆವರಣದಲ್ಲಿ ನವಿಲು ಧಾಮ ನಿರ್ಮಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ವನ್ಯಜೀವಿ ಸಂರಕ್ಷಣಾ ಕಾಯ್ದೆ 1972 ಕಲಂ 36 (ಎ) ಅಡಿಯಲ್ಲಿ ಬಂಕಾಪುರ ಪಟ್ಟಣದ 139 10 ಎಕರೆ ಕೋಟೆ ಪ್ರದೇಶವನ್ನು ಸಂರಕ್ಷಿತ ಮೀಸಲು ಪ್ರದೇಶ ಎಂದು ಘೋಷಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಯಾವಾಗ ಕ್ರಮ ಕೈಗೊಳ್ಳಲಾಗುವುದು,

ಇ) ಈವರೆಗೆ ಕೇವಲ ನಾಮ ಫಲಕ ಮತ್ತು ಕುಡಿಯುವ ನೀರಿಗೆ ರೂ 55 ಸಾವಿರ ಅನುದಾನ ಮಾತ್ರ ಬಿಡುಗಡೆಗೊಳಿಸಿ ಇನ್ನಿತರೇ ಯಾವುದೇ ಅಭಿವೃದ್ಧಿ ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಆದಷ್ಟು ತೀವ್ರಗತಿಯಲ್ಲಿ ಪೂರ್ಣ ಪ್ರಮಾಣದ ನವಿಲು ಧಾಮ ನಿರ್ಮಿಸಲು ಸರ್ಕಾರ ಅನುದಾನ ಬಿಡುಗಡೆ ಗೊಳಿಸಲು ಕ್ರಮ ಕೈಗೊಳ್ಳವುದು ಯಾವಾಗ?

ಶ್ರೀ ಸಿ ಚೆನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು

ಆ) ಸರ್ಕಾರದ ಅಧಿಸೂಚನೆ ಸಂಖ್ಯೆ ಅಪಜೀ 237 ಎಫ್‌ಡಿಬ್ಲ್ಯುಎಲ್ 2005 ದಿನಾಂಕ 09–06–2006ರಲ್ಲಿ ಈ ಪ್ರದೇಶವನ್ನು ಬಂಕಾಪುರ ನವಿಲು ಸಂರಕ್ಷಣಾ ಮೀಸಲು ಎಂದು ಘೋಷಿಸಲಾಗಿದೆ

ಇ) ಬಂಕಾಪುರ ನವಿಲು ಸಂರಕ್ಷಣಾ ಪ್ರದೇಶದ ನಿರ್ವಹಣೆ/ ಅಭಿವೃದ್ಧಿ ಇತ್ಯಾದಿ ಕಾಮಗಾರಿಗಳಿಗಾಗಿ ರೂ 18 ಲಕ್ಷಗಳ ಕ್ರಿಯಾ ಯೋಜನೆಯನ್ನು ತಯಾರಿಸಿ, ಕೇಂದ್ರ ಪುರಸ್ಕೃತ ರಾಷ್ಟ್ರೀಯ ಉದ್ಯಾನವನ ಮತ್ತು ಅಭಯಾರಣ್ಯ ಅಭಿವೃದ್ಧಿ ಯೋಜನೆಯಡಿ ಅನುದಾನ ಬಿಡುಗಡೆ ಮಾಡಲು ಕೇಂದ್ರ ಸರ್ಕಾರವನ್ನು ದಿನಾಂಕ 08–01–2007ರಲ್ಲಿ ಕೋರಲಾಗಿರುತ್ತದೆ ಅನುದಾನ ನಿರೀಕ್ಷಿಸಿದೆ

ಈ) ಅನುದಾನ ನಿರೀಕ್ಷಿಸಲಾಗಿದೆ

851(1113) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಶಿಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಸುವರ್ಣ ಕಾಯಕ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವ ಜನರಿಗೆ ಅನುಕೂಲ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ, ಶಿಗ್ಗಾಂವ್–ಸವಣೂರ ತಾಲ್ಲೂಕುಗಳಲ್ಲಿ ಸುವರ್ಣ ಕಾಯಕ ಯೋಜನೆ ಅಡಿಯಲ್ಲಿ ನಿರುದ್ಯೋಗಿ ಯುವ ಜನರಿಗೆ ಅನುಕೂಲ ಕಲ್ಪಿಸಿಕೊಡಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಶಿವಾನಂದ್ ಎಸ್ ನ್ಯಾಯ್ಕ (ಮಾನ್ಯ ಕೈಗಾರಿಕಾ ಸಚಿವರು)